Indian Journal of History and Archaeology

ISSN (E):2582-225X
Vol-1 Issue 4, NOV-DEC, 2019, 45-50

# ಚಿಕ್ಕಮಗಳೂರು ತಾಲೂಕಿನ ಜನಪದ ಸಾಹಿತ್ಯದಲ್ಲಿ ನಿಸರ್ಗ ಮತ್ತು ಗ್ರಹಿಕೆ

**ಚಂದ್ರಶೇಖರ ಎಸ್.ಡಿ**

**ಚಂದ್ರಶೇಖರ ಎಸ್.ಡಿ**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ಅಧ್ಯಯನ ವಿಭಾಗ,
ತುಮಕೂರು ವಿಶ್ವವಿದ್ಯಾಲಯ,
ತುಮಕೂರು

ಚಿಕ್ಕಮಗಳೂರಿಗೆ ಈ ಹೆಸರು ಬರಲು ಕಾರಣವೆಂದು ಹೇಳಲಾದ ಒಂದು ಐತಿಹ್ಯವುಂಟು, ಮಹಾಭಾರತ ಕಥೆಯಲ್ಲಿ ಬರುವ ಹಾಗೂ ಸಕ್ಕರೆಪಟ್ಟಣದಲ್ಲಿದ್ದ ರುಕ್ಮಾಂಗದನು ಚಿಕ್ಕಮಗಳೂರನ್ನೂ ಇದರ ಸಮೀಪದಲ್ಲಿರುವ ಹಿರೇಮಗಳೂರನ್ನೂ ಅನುಕ್ರಮವಾಗಿ ತನ್ನ ಹಿರಿಯ ಮತ್ತು ಕಿರಿಯ ಹೆಣ್ಣು ಮಕ್ಕಳಿಗೆ ಬಳುವಳಿಯಾಗಿ ನೀಡಿದನಂತೆ ಅಂದಿನಿಂದ ಈ ಊರುಗಳಿಗೆ ಚಿಕ್ಕಮಗಳ ಊರು ಮತ್ತು ಹಿರಿಯ ಮಗಳ ಊರು ಎಂಬ ಹೆಸರುಗಳು ಬಂದವೆಂದು ಪ್ರತೀತಿ. ಚಿಕ್ಕಮಗಳೂರನ್ನು ಅನೇಕ ಶಾಸನಗಳಲ್ಲಿ ಹಿರಿಯ ಮುಗಳಿ, ಪಿರಿಯ ಮುಗಳಿ, ಎಂತಲೂ ಚಿಕ್ಕಮಗಳೂರಿನ ಪಕ್ಕದ ಹಿರೇಮಗಳೂರನ್ನು ಚಿಕ್ಕ ಮುಗಳಿ, ಕಿರಿಯ ಮುಗಳಿ, ಇತ್ಯಾದಿಯಾಗಿ ಉಲ್ಲೇಖಿಸಿರುವುದುಂಟು.

ಚಿಕ್ಕಮಗಳೂರಿಗೆ ಈ ಹೆಸರು ಬರಲು ಕಾರಣವೆಂದು ಹೇಳಲಾದ ಒಂದು ಐತಿಹ್ಯವಿದೆ. ಈ ಊರಿನ ಹೆಸರು ಬೆಳೆದುಬಂದ ಬಗೆಗೆ ವಿಶೇಷವಾಗಿ ಅನೇಕ ಶಾಸನಗಳಿಂದ ಆಧಾರಗಳು ಸಿಗುತ್ತವೆ. ಇದರ ಅತ್ಯಂತ ಪ್ರಾಚೀನ ಹೆಸರು ಕಿರಿಯ ಮುಗುಳಿ ಎಂದಿದು ಇದೊಂದು ಅಗ್ರಹಾರವಾಗಿತ್ತು. ಇದಕ್ಕೆ ಹೊಂದಿಕೊಂಡು ಪಿರಿಯ ಮುಗುಳಿ ಎಂಬ ಇನ್ನೊಂದು ಅಗ್ರಹಾರವಿತ್ತು. ಅನಂತರ ಈ ಎರಡು ಸ್ಥಳಗಳನ್ನೂ ಚಿಕ್ಕಮುಗಳಿ, ಹಿರಿಯ ಮುಗುಳಿ ಎಂದು ಕರೆಯಲಾಗುತಿತ್ತು. ಚಿಕ್ಕ + ಮುಗುಳಿ ಎಂಬ ಪದದಿಂದ ಚಿಕ್ಕಮಗಳೂರೆಂದಾಯಿತು. ಹಿರಿಯ+ಮುಗುಳಿ ಎಂಬ ಪದದಿಂದ ಹಿರೇಮಗಳೂರಾಯಿತು. ಚಿಕ್ಕಮಗಳೂರಿಗೆ ಹೊಂದಿಕೊಂಡಂತೆ ಹಿರೇಮಗಳೂರು ಇದೆ. ಇಲ್ಲಿನ ದಂತ ಕಥೆಗಳ ಪ್ರಕಾರ ಹಿರೇಮಗಳೂರು ಒಂಬತ್ತು ಜನ ಸಿದ್ಧರ ನೆಲವಿಡಾಗಿತ್ತು. ಅವರು ಸಿದ್ಧ ಪುಷ್ಕರಣಿ ಎಂಬ ಜಲಾಶಯದ ಹತ್ತಿರ ತಪಸ್ಸು ಮಾಡಿದ್ದರು. ಅಲ್ಲದೆ ಪರಶುರಾಮನು ಇವಾಸವಾಗಿದ್ದುದರಿಂದ ಈ ಸ್ಥಳಕ್ಕೆ ಭಾರ್ಗವಪುರಿ ಎಂಬ ಹೆಸರಿತ್ತು

ಎಂದು ತಿಳಿದುಬರುತ್ತದೆ. ಸಕ್ಕರೆಪಟ್ಟಣದಲ್ಲಿದ್ದ ರುಕ್ಮಾಂಗದರಾಯನು ಚಿಕ್ಕಮಗಳೂರನ್ನೂ ಸಮೀಪದ ಹಿರೇಮಗಳೂರನ್ನೂ ಅನುಕ್ರಮವಾಗಿ ತನ್ನ ಕಿರಿಯ ಮತ್ತು ಹಿರಿಯ ಹೆಣ್ಣು ಮಕ್ಕಳಿಗೆ ಬಳುವಳಿಯಾಗಿ ನೀಡಿದನೆಂದೂ ಆ ಊರುಗಳಿಗೆ ಅನುಕ್ರಮವಾಗಿ ಚಿಕ್ಕಮಗಳೂರು ಮತ್ತು ಹಿರೇಮಗಳೂರು ಎಂಬ ಹೆಸರುಗಳು ಬಂದುವೆಂದೂ ಹೇಳಲಾಗಿದೆ.

ಜನಪದ ಸಾಹಿತ್ಯ ಹೆಸರಿಲ್ಲದ ಹೆಸರೊಲ್ಲದ ತಮ್ಮ ರಚನೆಯ ಮಹತ್ವವನ್ನು ತಾವೇ ಅರಿಯದ ಮುಗ್ಧ ಜನತೆಯ ಸ್ವತ್ತು. ಸರಳತೆ, ಮುಗ್ಧತೆ ಮತ್ತು ಪ್ರಕೃತಿ ಸಾಮ್ಯತೆ ಅದರ ಪ್ರಧಾನ ಗುಣಗಳು.ಮಾನವನಿಗೆ ಪ್ರಕೃತಿಯೇ ಅತಿಶಯವಾದುದು.ಅವನ ಕುತೂಹಲವನ್ನು ಅರಳಿಸಿದ್ದು, ಆನಂದವನ್ನುಂಟುಮಾಡಿದ್ದು, ಭೀತಿಯನ್ನು ಕಂಡದ್ದು ವಿಸ್ಮಯ ಶಕ್ತಿಯನ್ನು ಕುದುರಿಸಿದ್ದು ಪ್ರಕೃತಿಯೇ.ಪ್ರಕೃತಿ ಸೌಂದರ್ಯವೇ ಅವನಿಗೆ ಒಂದರೊಡನೆ ಮತ್ತೊಂದನ್ನು ಹೋಲಿಸುವ ಬಗೆಯನ್ನು ನಿರ್ದೇಶಿಸಿತು.ಪ್ರಕೃತಿಯಲ್ಲಿನ ಮರ, ಗಿಡ, ನೆಲ, ಜಲ, ಹೂ ಫಲಗಳನ್ನು ಕಂಡ ಮಾನವ ವಸ್ತುವಿನ ವರ್ಣನೆ ಮಾಡಿ ಹೇಳುವ ಸಾಮರ್ಥ್ಯವನ್ನು ಸಂಪಾದಿಸಿದ.

ಜನಪದ ಜೀವನ ನಿಸರ್ಗಮುಖವಾದುದು. ಸಹಜವಾಗಿಯೇ ಜನಪದ ಸಾಹಿತ್ಯದಲ್ಲೆಲ್ಲಾ ಪ್ರಕೃತಿಯನ್ನು ಬಗೆಬಗೆಯಾಗಿ ಗ್ರಹಿಸುವ ಯತ್ನಗಳಿವೆ. ಜನಪದರ ಸೌಂದರ್ಯೋಪಾಸನಾನುರಕ್ತಿ ದರ್ಶನವು ಅಂತಹ ಗ್ರಹಿಕೆಗಳಲ್ಲಿ ಒಂದು.ಅದು ಸೌಂದರ್ಯ ಮೀಮಾಂಸೆಯಿಂದ ಸಂಲಬ್ಧವಾದುದಲ್ಲ. ಅಲ್ಲದೇ ಇಲ್ಲಿಯ ಗ್ರಹಿಕೆಯಲ್ಲಿ ಪ್ರಕಟಗೊಳ್ಳುವ ಸೌಂದರ್ಯ ಭಾನಿಷ್ಠವಾದುದೇ ಹೊರತು ಬುದ್ಧಿಪೂರ್ವಕವಾದುದಲ್ಲ. ಜನಪದರ ನಿಸರ್ಗ ಗ್ರಹಿಕೆಯ ವೈಖರಿಯನ್ನು ಪರಿಚಯ ಮಾಡಿಕೊಳ್ಳಲು ಜನಪದ ಸಾಹಿತ್ಯದ ಎಲ್ಲ ಪ್ರಮುಖ ರೂಪಗಳನ್ನೂ ಪರಿಶೀಲಿಸಬೇಕಾಗುತ್ತದೆ.ಮುಖ್ಯವಾಗಿ ಕತೆ, ಪುರಾಣ, ಗೀತೆ, ಕಥನಗೀತೆ, ಒಗಟು, ಗಾದೆ ಮತ್ತು ನಂಬಿಕೆಗಳಲ್ಲಿ ಪ್ರಕೃತಿ ಗ್ರಹಿಕೆಯ ಬಗೆಬಗೆಯ ರೂಪಗಳಿವೆ. ನಿಸರ್ಗ ಗ್ರಹಿಕೆಯ ವಿಧಾನಗಳನ್ನು ಗುರುತಿಸುವಾಗ ಸೂರ್ಯ ಸಂಬಂಧೀ ಪ್ರಚಲಿತವಿರುವ ಪರಂಪರಾಗತ ಜ್ಞಾನವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.ಸೂರ್ಯನ ಬೆಳಕು ಚಂದ್ರನ ಬೆಳಕಿಗಿಂತ ಏಕೆ ಭಿನ್ನ? ಹಗಲಿನಲ್ಲಿ ಮಾತ್ರ ಸೂರ್ಯ ಪ್ರಸನ್ನನಾಗಿರಲು ಕಾರಣವೇನು? ಚಂದ್ರ ಮತ್ತು ನಕ್ಷತ್ರಗಳು ರಾತ್ರಿ ವೇಳೆಯಲ್ಲಷ್ಟೇ ಪ್ರಕಾಶಮಾನವಾಗಿರಲು ಕಾರಣಗಳೇನು? ನಕ್ಷತ್ರಗಳು ರಾಶಿರಾಶಿಯಾಗಿ ಏಕೆ ಕಾಣಿಸುತ್ತವೆ? ಇವೇ ಮುಂತಾದ ಪ್ರಶ್ನೆಗಳಿಗೆ ಜನಪದರು ಕಥೆ ಮತ್ತು ಪುರಾಣಗಳ ರೂಪದಲ್ಲಿ ಉತ್ತರ ಕಂಡುಕೊಳ್ಳಲು ಯತ್ನಿಸಿದ್ದಾರೆ.

ಸೂರ್ಯ ಸಂಬಂಧಿಯಾದ ಜನಪದ ಕಥೆಗಳು ಕನ್ನಡದಲ್ಲಿ ಪ್ರಚಲಿತದಲ್ಲಿವೆ. ಜೀ.ಶಂ.ಪ. ಅವರ 'ಕನ್ನಡ ಜನಪದ ಕಥೆಗಳು' (1970) ಸಂಗ್ರಹದ 'ಸಾವಿತ್ರಮ್ಮ' ಎಂಬ ಕಥೆಯಲ್ಲಿ ಸೂರ್ಯ ಅತಿಮಾನುಷ ಪತಿಯಾಗಿ ಕಾಣಿಸಿಕೊಂಡು ಹಂದಿ ರೂಪದ ರಾಜಕುಮಾರನ ಹುಟ್ಟಿಗೆ ಕಾರಣನಾಗುವ ವಿವರವಿದೆ. ದುರ್ಬಲರನ್ನು ಅಸಹಾಯಕರನ್ನು ಸೂರ್ಯ ಕೈಬಿಡುವುದಿಲ್ಲ, ರಕ್ಷಿಸುತ್ತಾನೆ ಎಂಬ ವಿಶ್ವಾಸ ಇಲ್ಲಿ ಪ್ರತಿಪಾದಿತವಾಗಿದೆ. ಗ್ರಹಣ ಸಂಬಂಧಿ ಕಥೆಗಳು ಕುತೂಹಲಕರವಾಗಿವೆ. ಸೂರ್ಯ ಗ್ರಹಣ ಎಂದರೆ ಸೂರ್ಯನ ಮಗನಾದ ಶನಿ ನಿಲ್ಲುವುದು ಎಂಬ ಕಲ್ಪನೆ ಜನಪದ ಕಥೆಗಳ ರೂಪದಲ್ಲಿ ಹರಡಿಕೊಂಡಿದೆ.ಶನಿಯು ಸೂರ್ಯ ಮತ್ತು ಛಾಯಾದೇವಿಯರ ಮಗನೆಂಬ ಪೌರಾಣಿಕ ತಿಳುವಳಿಕೆಯು ಜನಪದರಿಗೆ ಇದ್ದಂತಿದೆ.ಅಂದೇ ಮಕ್ಕಳಬ್ಬರಿಗೂ ಮನಸ್ತಾಪ ಬಂದು ಶನಿ ಸರ್ವರೂಪದಲ್ಲಿ ಬಂದು ತಂದೆಗೆ ಕಾಟ ಕೊಡುತ್ತಾನೆಂದು ಒಂದು ಕಥೆಯೇ ಇದೆ.

ಜನಪದ ಗೀತೆ ಕಾವ್ಯಗಳಲ್ಲೂ ಸೂರ್ಯನ ವಿಚಾರ ಬಂದಿದೆ. ಆದರೆ ಸೂರ್ಯೋದಯ ಸೂರ್ಯಾಸ್ತ ವರ್ಣನೆಗಳಿಗೆ ಇಲ್ಲಿ ಕೊರತೆ ಇದೆ.ಇಷ್ಟಾದರೂ ಗೀತೆ, ಕಾವ್ಯಗಳಲ್ಲಿ ಚಿತ್ರಿತನಾಗಿರುವ ಸೂರ್ಯ ಸರ್ವಶಕ್ತ ಜನಪದರು ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ತೊಡಗುವುದೇ ಸೂರ್ಯೋದಯದಿಂದ.ಅಂತೆಯೇ ಅವರ ಕೆಲಸ ಕಾರ್ಯಗಳು ಮುಗಿಯುವುದು ಸೂರ್ಯಾಸ್ತದಿಂದಲೇ.ಮುಂಜಾನೆ ಎದ್ದ ಕೂಡಲೇ ಸೂರ್ಯ ಸ್ತುತಿ ಮಾಡಿ ಅವನಿಗೆ ನಮಸ್ಕಾರ ಹೇಳುವುದು ರೂಢಿ.

**'ಮುಂಗೋಳಿ ಕೂಗ್ಯಾವು ಮೂಡು ಕೆಂಪೇರ್ಯಾವು**
**ನಾರಾಯಣಸಾಮಿ ರತುವೇರಿ। ಬರುವಾಗ**
**ನಾವೆದ್ದು ಕೈಯ ಮುಗಿದೇವ'**

ಇಲ್ಲಿ ಸೂರ್ಯನನ್ನು ನಾರಾಯಣಸ್ವಾಮಿಗೆ ಹೋಲಿಸಲಾಗಿದೆ.ಅವನನ್ನು ದೇವತೆಯಾಗಿ ಗ್ರಹಿಸಿರುವುದು ಸ್ಪಷ್ಟ.ಸೂರ್ಯನು ಉದಯವಾಗುವಾಗ ರಥವೇರಿ ಬರುತ್ತಾನೆಂಬ ಕಲ್ಪನೆ ಶಿಷ್ಟ ಮೂಲದ್ದು.ಪುರಾಣಗಳಲ್ಲಿ ಈ ಬಗ್ಗೆ ಸಾಕಷ್ಟು ವಿವರಗಳಿವೆ. ಶಿಲೆ, ವೀರಗಲ್ಲು ಮತ್ತು ವಿಗ್ರಹಗಳಲ್ಲಂತೂ ರಥದ ಚಿತ್ರ ಸಾಮಾನ್ಯವಾಗಿ ಕಂಡುಬಂದಿದೆ.ಸೂರ್ಯೋದಯ ಕಾಲದಲ್ಲಿ ಮೂಡು ಕೆಂಪೇರುವುದು ಜನಪದರ ಪ್ರತ್ಯಕ್ಷ ಅನುಭವ. ಪ್ರಕೃತಿಯ ನೆನಪಿನ ಒಂದು ಉತ್ತಮ ನಿರ್ದೇಶನವೆನಿಸಿರುವ ಕೆಳಗಿನ ತ್ರಿಪದಿ ಜನಪದ ಮನೋಧರ್ಮಕ್ಕೆ ಹಿಡಿದ ಕೈಗನ್ನಡಿಯಾಗಿದೆ.

**‘ಎದ್ದೊಂದ ಗಳಿಗೇಲಿ ಯಾರ್‍ಯಾರ ನೆನಿಯಾಲಿ**
**ಎಳ್ಳು ಜೀರಿಗೆ ಬೆಳಿಯೋಳ ಭೂಮಿತಾಯಿ**
**ಎದ್ದೊಂದು ಗಳಿಗೆ ನೆನದೇನು’**

ಭೂಮಿ ತಾಯಿಯನ್ನೇ ಅಧಿ ದೈವವಾಗಿಸಿಕೊಂಡ ಜನಪದ ಸಾಹಿತ್ಯಕ್ಕೆ ಸ್ಫೂರ್ತಿ ಕಾಯಕ.ಎದ್ದೊಂದ ಗಳಿಗೆಯಲ್ಲಿ ಯಾರು ಯಾರನ್ನೂ ನೆನೆಯದೆ ಭೂಮಿತಾಯಿಯನ್ನು ನೆನೆದು ಹಾಡತೊಡಗುವ ಜನಪದರ ಸೃಷ್ಟಿಯಲ್ಲಿ ವಾಸ್ತವ ಬದುಕಿನ ತುಡಿತ ಮಿಡಿತಗಳು ಅನುಭವ ವೇದ್ಯವಾಗುವುದು ಸಹಜ.ಜನಪದರಿಗೆ ಪ್ರಕೃತಿಯ ಮೇಲೆ ಅನನ್ಯ ಪ್ರೀತಿ, ಗೌರವ ವಿಶ್ವಾಸ, ಭಯ ಭಕ್ತಿ, ಆದುದರಿಂದಲೇ ಅವರು ತಮ್ಮ ಕಣ್ಣಿಗೆ ಕಾಣುವ ಎಲ್ಲರ ಇರುವಿಗೂ ಕಾರಣಳಾದ ಭೂದೇವಿಯನ್ನು ಮೊದಲು ಸ್ಮರಿಸಿಕೊಳ್ಳುತ್ತಾರೆ.

**‘ಒಕ್ಕಲು ಗೇರ್‍ಯಾಗ ಮಳಿರಾಜಾ। ಅವರು**
**ಮಕ್ಕಳ ಮಾರ್‍ಯಾರ ಮಳಿರಾಜ**
**ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು**
**ಬತ್ತಂತ ತಿರುಗ್ಯಾರ ಮಳಿರಾಜಾ’**

ಹೊಟ್ಟೆಗೆ ತಿನ್ನಬೇಕಾದ ಭತ್ತವನ್ನು ಹುಡುಕಿದರೂ ಅದು ಎಲ್ಲಿಯೂ ದೊರಕಲಿಲ್ಲ. ದೊರೆಯದ ಈ ಭತ್ತವನ್ನು ಕೊಳ್ಳಲು ಅವರು ಮಕ್ಕಳನ್ನು ಮಾರಿ ಹಣ ಗಳಿಸಿದರು. ಪ್ರಕೃತಿ ಮುನಿಸಿಕೊಂಡಿದ್ದರೆ ಫಲದಿಂದ ಮಕ್ಕಳಿಗಿಂತ ಅವರಿಗೆ ಭತ್ತ ಪ್ರಿಯವಾಯಿತು.ಮಕ್ಕಳನ್ನು ಕೆಲವರು ಹೇಗೋ ಮಾರಿದರು.

**‘ಮೂಡಲ್ ಕುಣಿಗಲು ಕೆರೆ ನೋಡೋರ್‌ಗೊಂದ್ಯೆ ಭೋಗ**
**ಮೂಡಿ ಬರ್‍ತಾನೆ ಚಂದಿರಾಮಾ । ತಾನಂದನೊ**
**ಮೂಡಿ ಬರ್‍ತಾನೆ ಚಂದಿರಾಮಾ’**

Indian Journal of History and Archaeology
ISSN (E):2582-225X, Vol-1 Issue 4, NOV-DEC, 2019, 45-50

ಈ ತುಂಬಿದ ಕೆರೆ ನೋಡುವವರಿಗೆ ಒಂದು 'ಐಭೋಗ' ಕೆರೆಯನ್ನು ಕಂಡದ್ದರಿಂದಾಗುವ ಆನಂದಾನುಭವ ಈ ಐಭೋಗ, ಈ ಅನುಭವವನ್ನು ವರ್ಣಿಸಲು ಜನಪದ ಕವಿ ಬಳಸಿರುವ ಉಪಮೆಗಳು ಗಮನಾರ್ಹವಾಗಿವೆ.

**'ಹೂವಿನ್ಯಾಗ ಹುದಗ್ಯಾನ ಮಾಲ್ಯಾಗ ಮಲಗ್ಯಾನ**
**ಮೊಗ್ಗಾಗಿ ಕಣ್ಣು ತೆರೆದಾನ । ಲಿಂಗಯನ**
**ನೋಡಟಗೆ ನಿದ್ದಿ ಬಯಲಾಗಿ'**

ಒಂದೇ ಪರಾತ್ಪರ ಶಕ್ತಿ ಹೂವಿನಲ್ಲಿ ಹುದುಗಿ, ಮಾಲೆಯಲ್ಲಿ ಮಲಗಿ, ಮೊಗ್ಗಿನಲ್ಲಿ ಕಣ್ಣು ತೆರೆದುದನ್ನು ಕಾಣುವವರು ಇವರು.ದೈವೀ ಅನುಭವದಿಂದ ಎಚ್ಚರಗೊಂಡ ಇವರ ಕಣ್ಣುಗಳು ಇಂದ್ರಿಯ ಸೌಂದರ್ಯದಿಂದ ಆತ್ಮ ಸೌಂದರ್ಯದವರೆಗಿನ ಚೆಲುವಿನ ನಿಲುವುಗಳನ್ನು ಗುರುತಿಸಿ ಹಾಡಿರುವುದು ಜನಪದ ಜಾಯಿಮಾನಕ್ಕೆ ಅನುಗುಣವಾಗಿಯೇ ಇದೆ. ಎಷ್ಟೋ ವೇಳೆ ಕಥೆಯು ಆರಂಭದಲ್ಲಿ ನಿರ್ವಹಣೆಯಲ್ಲಿ ವರ್ಣನೆಗಳನ್ನು ತರುವ ರೀತಿಯಲ್ಲಿ ಮಾರ್ಗಕಾವ್ಯದ ರೀತಿಯೇ ಕಾಣುತ್ತದೆ.ಅಷ್ಟಾದಶ ವರ್ಣನೆಯ ಕಾಳಜಿ ಇಲ್ಲಿ ಇರದಿದ್ದರೂ ನಗರ ವರ್ಣನೆ ರಾಜನ ವೈಭವದ ವರ್ಣನೆಯನ್ನು ಅವನ ದಂಡು ದಾಳಿಗಳ ವಿಚಾರವನ್ನು ವಿಸ್ತರಿಸಿ ಹೇಳುವುದುಂಟು.

ಜನಪದ ನಂಬಿಕೆಗಳಲ್ಲಿ ಕೂಡ ನಿಸರ್ಗದ ಸಹಜ ಗ್ರಹಿಕಾ ವಿಧಾನವನ್ನು ಗುರುತಿಸಬಹುದು. ನೈಜ ನಂಬಿಕೆಗಳು ಗಾದೆ ರೂಪದಲ್ಲಿರುವುದು ಸಾಮಾನ್ಯ.ಜನಪದ ವೈದ್ಯವಂತೂ ನಿಸರ್ಗವನ್ನೇ ಒಂದು ಸಂಸ್ಕೃತಿಯಾಗಿ ಸ್ವೀಕರಿಸಿದೆ. ನಿಸರ್ಗದ ಉತ್ಪನ್ನಗಳನ್ನು ನೈಸರ್ಗಿಕ ರೀತಿಯಲ್ಲಿಯೇ ಸಂಗ್ರಹಿಸುವುದು ಮತ್ತು ಅವುಗಳನ್ನು ಸಂಸ್ಕರಣ ಕ್ರಿಯೆಗೆ ಗುರಿ ಮಾಡದೆ ಬಳಸುವುದು ಅದರ ಜಾಯಮಾನ ವಾಸ್ತವವಾಗಿ ಜನಪದ ವೈದ್ಯವು ಸಸ್ಯ ಸಂಸ್ಕೃತಿ ಮತ್ತು ಸಹಜ ಸ್ಥಿತಿ ಬೆರಕೆಯಾಗದ ಸ್ಥಿತಿ ಹೇಗೆ ಎರಡು ಅರ್ಥದ ನೆಲೆಗಳನ್ನು ಹೊಂದಿದೆ.ನಿಸರ್ಗದ ಜೊತೆಗೆ ಯಾವಾಗಲೂ ನಿಕಟ ಸಂಬಂಧ ಸ್ಥಾಪಿಸಿಕೊಂಡಿರುವ ಮಾನವ ಪ್ರಕೃತಿಯ ಒಡನಾಡಿಯಾಗಿ ಪ್ರಕೃತಿಯಿಂದಲೇ ಸುತ್ತುವರೆದು ಬದುಕು ನಡೆಸುತ್ತಿರುವವನು.ಆದುದರಿಂದಲೇ ಅವನ ಹೋಲಿಕೆಗಳೆಲ್ಲಾ ನೇರವಾಗಿ ಪ್ರಕೃತಿಗೆ ಅನ್ವಯಿಸುತ್ತವೆ. ಒಟ್ಟಿನಲ್ಲಿ ಜನಪದರ ಸೌಂದರ್ಯ ದೃಷ್ಟಿಯ ತಳಹದಿ ಸೃಷ್ಟಿ ಸಮಸ್ತದೊಂದಿಗೆ ಆವರಿಸಿರುವ ಆತ್ಮೀಯತೆಯೇ ಆಗಿದೆ.ಈ ಆತ್ಮೀಯತೆ ಎಲ್ಲಾ ನೈಸರ್ಗಿಕ ವಸ್ತುಗಳ ಮೇಲೂ ತಮ್ಮ ಪ್ರೀತಿ ವಾತ್ಸಲ್ಯದ ಬೆಳಕನ್ನು ಚೆಲ್ಲಿ, ಚೆಲುವನ್ನಾಗಿ ಮಾಡಿ ಎತ್ತಿ

ಹಿಡಿಯುತ್ತದೆ.ಜನಪದ ಸಾಹಿತ್ಯ 'ಜನಪದರ ಬಾಳಿಗೊಂದು ಭರವಸೆಯನ್ನು ಬದುಕಿನ ಬಗೆಗೆ ಒಲವನ್ನು' ತಂದುಕೊಡುತ್ತದೆ.

ಒಟ್ಟಾರೆ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಜನಪದ ಸಾಹಿತ್ಯ ಹೆಸರಿಲ್ಲದ ಹೆಸರೊಲ್ಲದ ತಮ್ಮ ರಚನೆಯ ಮಹತ್ವವನ್ನು ತಾವೇ ಅರಿಯದ ಮುಗ್ಧ ಜನತೆಯ ಸ್ವತ್ತು. ಸರಳತೆ, ಮುಗ್ಧತೆ ಮತ್ತು ಪ್ರಕೃತಿ ಸಾಮ್ಯತೆ ಅದರ ಪ್ರಧಾನ ಗುಣಗಳು.ಮಾನವನಿಗೆ ಪ್ರಕೃತಿಯೇ ಅತಿಶಯವಾದುದು.ಅವನ ಕುತೂಹಲವನ್ನು ಅರಳಿಸಿದ್ದು, ಆನಂದವನ್ನುಂಟುಮಾಡಿದ್ದು, ಭೀತಿಯನ್ನು ಕಂಡದ್ದು ವಿಸ್ಮಯ ಶಕ್ತಿಯನ್ನು ಕುದುರಿಸಿದ್ದು ಪ್ರಕೃತಿಯೆ ಎಂಬುದು ಗಮನಾರ್ಹ.

**ಪರಾಮರ್ಶನ ಗ್ರಂಥಗಳು**

1. ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್ – 1985
2. ಪಾರ್ಥಸಾರಥಿ – ಚಿಕ್ಕಮಗಳೂರು ಜಿಲ್ಲಾದರ್ಶನ,
3. ಕಾಶಿ ವಿಶ್ವನಾಥಶೆಟ್ಟಿ – ಚಿಕ್ಕಮಗಳೂರು ಜಿಲ್ಲಾದರ್ಶನ, 1978,
4. ರಮೇಶ, ಬೆ.ಗೊ.– ಚಿಕ್ಕಮಗಳೂರು ತಾಲ್ಲೂಕು ದರ್ಶನ – 1985
5. ಜೀ.ಶಂ. ಪರಮಶಿವಯ್ಯ (1967). "ಜನಪದ ಸಾಹಿತ್ಯ ಸಮೀಕ್ಷೆ", ಮೈಸೂರು.
6. ಎಚ್.ಜೆ. ಲಕ್ಕಪ್ಪಗೌಡ (ಸಂ.) (1973). "ಒಗಟುಗಳು", ಮೈಸೂರು ವಿ.ವಿ., ಮೈಸೂರು.
7. ಬರಗೂರು ರಾಮಚಂದ್ರಪ್ಪ (ಪ್ರ.ಸಂ.). (1993). "ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಮತ್ತು ಸಾಮಾಜಿಕ ಸ್ಥಿತ್ಯಂತರ", ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
8. ಸಿ.ಪಿ.ಕೆ. (1969). "ಜಾನಪದ ಪ್ರತಿಭೆ".
9. ದುರ್ಗಾ ಭಾಗವತ್ (ಮೂಲ) (ಅನು: ಕೆ. ಮರಳಸಿದ್ಧಪ್ಪ) (1974). "ಭಾರತೀಯ ಜಾನಪದ ಸಮೀಕ್ಷೆ".